ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸದನದ ನಾಯಕರು ಈ ರೀತಿ ಶ್ರೀಮತಿ ಇಂದಿರಾಗಾಂಧಿಯವರ ಬಗ್ಗೆ ಮಾತನಾಡಲು ಯಾವ ರೂಲ್ ಅಪ್ಲೈ ಮಾಡಿದರು, ಈ ರೀತಿ ಅವರ ಹೆಸರನ್ನು ಈ ಸದನದಲ್ಲಿ ಉಪಯೋಗ ಮಾಡುವುದು ಸರಿಯೇ ?

ಶ್ರೀ ಬಿ. ಬಸವಲಿಂಗಪ್ಪ.—ನೀವು ಸಾವಿರಾರು ಕಲ್ಲು ಹಾಕಿದ್ದೀರಿ, ಇಂದಿರಾಗಾಂಧಿಯವರು ಅದೊಂದೇ ದೊಡ್ಡ ಕಲ್ಲು ಹಾಕಿರುವುದು.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಭಾನಾಯಕರು ಒಂದು ದೊಡ್ಡ ಮಾತು ಹೇಳಿದರು. ಇಂದಿರಾಗಾಂಧಿಯವರು ವಿಜಯನಗರ ಉಕ್ಕಿನ ಕಾರ್ಖಾನೆಗೆ ಅಡಿಗಲ್ಲು ಹಾಕಿದರು ಎಂಬ ವಿಚಾರವಾಗಿ ನೀವು ಆ ಕಲ್ಲನ್ನು ತೆಗೆಯುವುದಕ್ಕೆ ಏನಾದರೂ ಪ್ರಯತ್ನ ಮಾಡಿದ್ದೀರಾ. ಸುಮ್ಮನೆ ಬಾಯಿ ಮಾತಿನಲ್ಲಿ ಹೇಳುತ್ತೀರಿ. ಎಲ್ಲಾ ಪಾರ್ಟಿಯವರನ್ನೂ ಕರೆದುಕೊಂಡು ಹೋಗಿ ಅಜಿಟೇಷನ್ ಮಾಡುತ್ತೇವೆಂದು ಹೇಳಿದಿರಿ. ಆದರೆ ಇವತ್ತಿನವರೆಗೂ ಯಾವ ಅಜಿಟೇಷನ್ನೂ ಇಲ್ಲ. ವಿಜಿಟೇಷನ್ ಆಗಿದೆ. ಸುಮ್ಮನೆ ಏಕೆ ಮಾತು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಕೃಷ್ಣನ್‌ರವರಿಗೂ ಗೊತ್ತುಂಟು. ವಿದ್ಯಾರ್ಥಿಗಳು ಬಂದರು, ಬೇರೆಯವರೂ ಬಂದರು, ಸೈಕಲ್ ಮೇಲೆ ಬಂದರು. ನನ್ನನ್ನು ಭೇಟಿ ಮಾಡಿದರು, ನಾನು ಅವರಿಗೆ ನಾಲ್ಕು ಮಾತುಗಳನ್ನು ಹೇಳಿದ್ದೇನೆ. ದೆಹಲಿಗೂ ಹೋಗಿದ್ದೇವೆ, ಡೆಲಿಗೇಷನ್ ತೆಗೆದುಕೊಂಡು ಹೋಗಿದ್ದು ಆಯಿತು. ಕನಿಷ್ಟ ಪಕ್ಷ.....

ಶ್ರೀ ಯಂ. ಭೂಪತಿ.—ಡೆಲಿಗೇಷನ್ ಯಾವಾಗ ಹೋಗಿತ್ತು .....

ಶ್ರೀ ಎಂ. ಎಸ್. ಕೃಷ್ಣನ್.—ನೀವು ಇವತ್ತಿನವರೆಗೂ ಈ ವಿಷಯದಲ್ಲಿ ಯಾವ ಹೋರಾಟಕ್ಕೆ ಇಳಿದಿದ್ದೀರಿ.

ಶ್ರೀ ಯಂ. ಭೂಪತಿ.—ಕರ್ನಾಟಕ ಬಂದ್ ಮಾಡುವುದಕ್ಕೆ ಕರೆ ಕೊಡುತ್ತೇವೆಂದು ಹೇಳಿದಿರಿ, ಎಲ್ಲಿ ಕೊಟ್ಟಿದ್ದೀರಿ, ಒಂದು ಪತ್ರ ಬರೆದರೆ, ಉತ್ತರ ಕೊಡುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಗಳು ಇಂದಿರಾಗಾಂಧಿಯವರು ಹಾಕಿರತಕ್ಕ ಅಡಿಗಲ್ಲಿನ ವಿಚಾರ ಹೇಳಿದರು. ಆದರೆ ೧೯೭೭-೭೮, ೧೯೭೮-೭೯ರಲ್ಲಿ ಕೇಂದ್ರದಲ್ಲಿ ತಮ್ಮ ಪಕ್ಷದ ಸರ್ಕಾರ ಇದ್ದಾಗ, ಆ ಕಲ್ಲನ್ನು ತೆಗಿಸಿ, ಆಲ್ಲಿ ಕಬ್ಬಿಣ ತಯಾರುಮಾಡಿ, ಇಡೀ ದೇಶಕ್ಕೆಲ್ಲಾ ಕಳುಹಿಸಿ ಕೊಟ್ಟಿತ್ತು ಎಂದು ಕಾಣಿಸುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—೧೦ ವರ್ಷದಲ್ಲಿ ಆಗದೇ ಇರತಕ್ಕ ಕೆಲಸ, ಕೇವಲ ಎರಡು ವರ್ಷಗಳಲ್ಲಿ ಮಾಡುವುದಕ್ಕಾಗುತ್ತದೆಯೇ ?

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಶಿಕ್ಷಕರ ಕೊರತೆ.

೧೧೭. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿಂವರೇ ?

ಅ) ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಹಾಗೂ ಎಲ್ಲಾ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಶಿಕ್ಷಕರ ಕೊರತೆಗಳ ಸಂಖ್ಯೆ ಎಷ್ಟು ? (೧೯೮೫-೮೬, ೧೯೮೬-೮೭ ವಂತ್ತು ೧೯೮೭-೮೮) ಪ್ರತಿಯೊಂದು ವರ್ಷದಲ್ಲಿ ಆಯಾಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಶಿಕ್ಷಕರ ಕೊರತೆಯನ್ನು ನಮೂದಿಸಬೇಕಂ ?

ಆ) ಶಿಕ್ಷಕರ ಕೊರತೆಯನ್ನು ಹೋಗಲಾಡಿಸಲು ಕೈಗೊಂಡ ಕ್ರಮಗಳೇನು ?

ಇ) ಈ ವ್ಯವಸ್ಥೆಗಾಗಿ ೧೯೮೭-೮೮ರ ಆಯವ್ಯಯದಲ್ಲಿ ಇಟ್ಟ ಹಣವೆಷ್ಟು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮಂತ್ರಿಗಳು).—

ಅ) ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಸಂಖ್ಯೆ.

೧೯೮೫–೮೬	...	೧೯,೩೩೦
೧೯೮೬–೮೭	...	೫,೬೦೫
೧೯೮೭–೮೮	...	೫,೬೦೫

ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಸಂಖ್ಯೆ.

೧೯೮೫–೮೬	...	೯೬೦
೧೯೮೬–೮೭	...	೧,೨೦೫
೧೯೮೭–೮೮	...	೮೨೮

ಆ) ೧೯೮೫–೮೬ ಜಿಲ್ಲಾ ಆಯ್ಕೆ ಸಮಿತಿ ಮೂಲಕ ಶಾಲಾ ಶಿಕ್ಷಕರ ಹುದ್ದೆಗಳಿಗೆ ನೇಮಕ ಮಾಡಿ ಕೊರತೆ ಪೂರೈಸಲಾಗಿದೆ.
೧೯೮೬–೮೭. ೩,೭೨೬ ಗುತ್ತಿಗೆ ಆಧಾರದ ಮೇಲೆ ಅಭ್ಯರ್ಥಿಗಳನ್ನು ನೇಮಿಸಲಾಗಿದೆ.
೧೯೮೭–೮೮. ೩,೭೨೬ ಗುತ್ತಿಗೆ ಆಧಾರದ ಮೇಲೆ ಅಭ್ಯರ್ಥಿಗಳನ್ನು ಸೇವೆಯಲ್ಲಿ ಮುಂದುವರೆಸಲಾಗಿದೆ. ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ೧೯೮೫–೮೬ ಮತ್ತು ೧೯೮೬–೮೭ರಲ್ಲಿ ಖಾಲಿ ಇರುವ ಹುದ್ದೆಗಳಿಗೆ ಸಹಾಯಕ ಶಿಕ್ಷಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಲಾಗಿದೆ. ೧೯೮೭–೮೮ರಲ್ಲಿ ಖಾಲಿ ಹುದ್ದೆಗಳಿಗೆ ವಿಭಾಗೀಯ ನೇಮಕಾತಿ ಸಮಿತಿಯ ಮೂಲಕ ಖಾಯಂ ಶಿಕ್ಷಕರನ್ನು ನೇಮಕ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು.

ಈ ಖಾಲಿ ಜಾಗಗಳು ಯೋಜನೇತರ ಶೀರ್ಷಿಕೆಯಲ್ಲಿ ಬರುವ ಕಾರಣ ಹೆಚ್ಚುವರಿ ಹಣ ಒದಗಿಸುವ ಅವಶ್ಯಕತೆ ಬರುವುದಿಲ್ಲ.

ಪ್ರೌಢಶಾಲಾ ಶಿಕ್ಷಕರ ಹುದ್ದೆಗಳು.

ಈ ವ್ಯವಸ್ಥೆಗಾಗಿ ರೂ. ೧,೨೬,೮೧,೩೧೦-೦೦ ರೂಪಾಯಿಗಳಷ್ಟು ಹಣ ಮಿಾಸಲಿಡಲಾಗಿದೆ.

ಅಧ್ಯಕ್ಷರು.—ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ದಾವಣಗೆರೆ–ಹರಿಹರ ಹೊರವಲಯದಿಂದ ಹೋಗುವ ಳನೇ ರಾಷ್ಟ್ರೀಯ ಹೆದ್ದಾರಿ.

೩೫೩. ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾವಣಗೆರೆ–ಹರಿಹರ ಹೊರವಲಯದಿಂದ ಹೋಗುವ ಳನೇ ರಾಷ್ಟ್ರೀಯ ಹೆದ್ದಾರಿ ಕೆಲಸ ಪ್ರಾರಂಭವಾಗಿ ಎಷ್ಟು ವರ್ಷಗಳಾದವು ?

ಆ) ಸದರೀ ಕೆಲಸಕ್ಕಾಗಿ ಇಲ್ಲಿಯವರೆಗೆ ವಿನಿಯೋಗಿಸಿದ ಹಣವೆಷ್ಟು ?

ಇ) ಈ ರಸ್ತೆಯನ್ನು ಸಾರ್ವಜನಿಕರ ಉಪಯೋಗಕ್ಕೆ ಬಿಡದಿರಲು ಕಾರಣವೇನು ?

ಈ) ಳನೇ ರಾಷ್ಟ್ರೀಯ ಹೆದ್ದಾರಿಯು ದಾವಣಗೆರೆ ನಗರ ಮಧ್ಯ ಭಾಗದಿಂದ ಹೋಗಿರುವುದರಿಂದ ವಾಹನಗಳ ಓಡಾಡಕ್ಕೂ, ನಾಗರೀಕರ ಸಂಚಾರಕ್ಕೂ ತೊಂದರೆಯಾಗುತ್ತಿರುವ ವಿಷಯ ಮತ್ತು ಆಗಿಂದಾಗ್ಗೆ ಅಪಘಾತಗಳುಂಟಾಗುತ್ತಿರುವ ವಿಷಯ ಸರಕಾರದ ಗಮನಕ್ಕೆ ಬಂದಿದೆಯೇ ?